## ಗೋಲ್ಡ್ ಕೋಸ್ಟ್ ಕಾಮನ್‌ವೆಲ್ತ್ ಕ್ರೀಡಾಕೂಟ -2018

# ಮಲ್ಲರಿಗೆ ಮರಳಿ ಅರಳುವ ಕನಸು

■ ಗಿರೀಶ ದೊಡ್ಡಮನಿ

ಕ್ವೀನ್ಸ್ ಲೆಂಡ್‌ನ ಗೋಲ್ಡ್ ಕೋಸ್ಟ್‌ನಲ್ಲಿ ಆರಂಭವಾಗಿರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಮಲ್ಲರು ಭವಿಷ್ಯದ ಕನಸು ಹೊತ್ತು ತೆರಳಿದ್ದಾರೆ. ರಿಯೊ ಒಲಿಂಪಿಕ್ಸ್‌ನಲ್ಲಿ ಸಾಕ್ಷಿ ಮಲಿಕ್ ಹೊರತುಪಡಿಸಿ ಉಳಿದವರು ನಿರಾಸೆ ಅನುಭವಿಸಿದ್ದರು. ಇದೀಗ ಈ ಕೂಟದಲ್ಲಿ ಮಿಂಚಿದರೆ ಮುಂಬರಲಿರುವ ಏಷ್ಯನ್ ಕ್ರೀಡಾಕೂಟ ಮತ್ತು 2020ರ ಟೋಕಿಯೊ ಒಲಿಂಪಿಕ್ಸ್‌ಗೆ ತೆರಳಲು ಆತ್ಮವಿಶ್ವಾಸದ ಟಾನಿಕ್ ಲಭಿಸಲಿದೆ.

ಏಪ್ರಿಲ್ 4ರಿಂದ 15ರವರೆಗೆ ಈ ಕೂಟ ನಡೆಯಲಿದೆ. ಕುಸ್ತಿ ವಿಭಾಗದಲ್ಲಿ ಭಾರತಕ್ಕೆ ಪದಕ ಜಯಿಸುವ ಭರವಸೆ ಇದೆ. 2010ರಿಂದ ಈಚೆಗೆ ಕುಸ್ತಿಪಟುಗಳು ಮಾತ್ರ ಪದಕಗಳನ್ನು ಗೆದ್ದಿದ್ದಾರೆ. ಹರಿಯಾಣದ ಫೋಗಟ್ ಸಹೋದರಿಯರು, ಸುಶೀಲ್‌ಕುಮಾರ್, ಯೋಗೇಶ್ವರ್ ದತ್ ಅವರ ಸಾಧನೆ ದೊಡ್ಡದು. ಆದರೆ ಈ ಬಾರಿ ಗೀತಾ ಫೋಗಟ್, ಯೋಗೇಶ್ವರ್ ದತ್ ಅವರು ಅಖಾಡಕ್ಕೆ ಇಳಿಯುತ್ತಿಲ್ಲ. ಆದರೆ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಭಾರತದ ಏಕೈಕ ಕುಸ್ತಿಪಟು ಸುಶೀಲ್ ಕುಮಾರ್ ಕಣದಲ್ಲಿದ್ದಾರೆ.



ಬಬಿತಾಕುಮಾರಿ ಫೋಗಟ್

### ಕಳಂಕ ತೊಳೆಯುವತ್ತ ಚಿತ್ತ

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ನಂತರ ಸುಶೀಲ್ ಕುಮಾರ್ 2014ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ 74 ಕೆಜಿ ವಿಭಾಗದಲ್ಲಿ ಚಿನ್ನದ ಸಾಧನೆ ಮಾಡಿದ್ದರು. ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ಅವರು ಗಾಯದ ಸಮಸ್ಯೆ ಮತ್ತು ವಿವಾದಗಳ ಮೂಲಕವೇ ಹೆಚ್ಚು ಸುದ್ದಿಯಾಗಿದ್ದಾರೆ. 2016ರಲ್ಲಿ ಬಜರಂಗ್ ಉದ್ದೀಪನಾ ಮದ್ದು ಸೇವನೆ ಪ್ರಕರಣದಲ್ಲಿ ಸುಶೀಲ್ ಬೆಂಬಲಿಗರ ಕೈವಾಡದ ಮಾತುಗಳು ಹರಿದಾಡಿದ್ದವು. ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದ ಆಯ್ಕೆ ಟ್ರಯಲ್ಸ್‌ನಲ್ಲಿ 74 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಸುಶೀಲ್ ಮತ್ತು ಪ್ರವೀಣ್ ರಾಣಾ ಸೆಣಸಾಡಿದ್ದರು. ಸುಶೀಲ್ ಎದುರು ನಿಲ್ಲದಂತೆ ಪ್ರವೀಣ್‌ಗೆ ಕೆಲವರು ಬೆದರಿಕೆ ಹಾಕಿದ್ದು ಸುದ್ದಿಯಾಗಿತ್ತು. ಪ್ರೊ ಕುಸ್ತಿ ಲೀಗ್‌ನಲ್ಲಿ ಸುಶೀಲ್ ಅವರನ್ನು ಸೋಲಿಸಿಯೇ ತೀರುವುದಾಗಿ ಪ್ರವೀಣ್ ಪ್ರತಿಜ್ಞೆ ಮಾಡಿದ್ದರು. ಆದರೆ ಗಾಯದ ಸಮಸ್ಯೆಯಿಂದ ಸುಶೀಲ್ ಪ್ರೊ ಲೀಗ್‌ನಲ್ಲಿ ಕಣಕ್ಕಿಳಿಯಲಿಲ್ಲ.

ಏ.6 ರಂದು ತಂಡವು ಗೋಲ್ಡ್‌ಕೋಸ್ಟ್‌ಗೆ ಹೊರಡಲಿದೆ. ಸುಶೀಲ್



ಸಾಕ್ಷಿ ಮಲಿಕ್





